

## ಯಾಕಿಷ್ಟ?

ನನ್ನ ಏಳು ವರ್ಷದ ಮಗಳು ಪ್ರತಿದಿನ ರಾತ್ರಿ 10 ಗಂಟೆಯಾದರೂ ಮಲಗಲು ತಕರಾರು ಮಾಡುತ್ತಾಳೆ. ಆ ದಿನ ಕೆಲಸ ಮಾಡಿ ದಣಿದಿದ್ದ ನನಗೆ ಬೇಗ ಮಲಗಬೇಕಿತ್ತು. ಬೆಳಗ್ಗೆ ಬೇಗ ಏಳಬೇಕಿದ್ದರಿಂದ ಮಲಗಲು ತಕರಾರು ತೆಗೆಯುವ ಮಗಳ ಬಗ್ಗೆ ಕೋಪ ಬಂದಿತ್ತು.

ಒಂದಷ್ಟು ಬೈದು ಮಲಗುವಂತೆ ತಾಕೀತು ಮಾಡಿದೆ. ವಾಚಾಳಿ ಮಗಳು ಕೋಪ ಬಂದ ಅಮ್ಮನನ್ನು ರಮಿಸುವ ಆಟ ಶುರು ಮಾಡಿದಳು. ರೂಮಿನ ಲೈಟು ಆರಿಸಿದ್ದರಿಂದ ನನ್ನ ಮುಖದ ಮೇಲೆಲ್ಲ ಕೈಯಾಡಿಸಿ, 'ಅಮ್ಮ, ನಿನ್ನ ಮೂಗನ್ನು ಕಂಡರೆ ನನಗೆ ತುಂಬಾ ಇಷ್ಟ' ಎಂದಳು. 'ಹೌದಾ? ಆದರೆ ಯಾಕೆ ಅಂತ ಹೇಳಬೇಕು' ಅಂದೆ. ನನ್ನ ದಪ್ಪ ಮೂಗಿನ ಬಗ್ಗೆ ನನಗೇ ಮೆಚ್ಚುಗೆಯಿಲ್ಲ. ಅವಳ ಬಾಯಿಯಿಂದ ಏನು ಬರುತ್ತದೆ ಎನ್ನುವ ತವಕ ನನಗೆ.

ಇದನ್ನು ನಿರೀಕ್ಷಿಸದ ಅವಳು ಅರೆಕ್ಷಣ ಮೌನವಾಗಿ ಮರುಕ್ಷಣ ಕೈಯನ್ನು ನನ್ನ ಹುಬ್ಬಿನ ಮೇಲಿಟ್ಟು 'ನಿನ್ನ ಹುಬ್ಬು ಎಂದರೆ ನನಗೆ ನಿನ್ನ ಮೂಗಿಗಿಂತಲೂ ಇಷ್ಟ' ಎಂದಳು. 'ಹಾಗಾದರೆ ಅದ್ಯಾಕೆ ಅಂತಲಾದರೂ ಹೇಳು' ಎಂದೆ. 'ಯಾಕಂದ್ರೆ ನಿನ್ನ ಹುಬ್ಬಿನಲ್ಲಿ ನಿನ್ನ ಮೂಗಿಗಿಂತ ಹೆಚ್ಚು ಕೂದಲಿದೆ...' ಅಂದಳು. ಅವಳಿಂದ ಈ ಉತ್ತರ ನಿರೀಕ್ಷಿಸಿರಲಿಲ್ಲ. ಈ ಬಾರಿ ಬಾಯಿ ಮುಚ್ಚಿ ಮಲಗುವ ಸರದಿ ನನ್ನದಾಯಿತು.

**ಪ್ರೇಮಲತಾ ಬಿ.**

## ಸುವಾಸನೆ

ಅಂದು ಬೆಳಿಗ್ಗೆ ನನ್ನ ಸ್ನೇಹಿತ ತನ್ನ ಸ್ನೇಹಿತನೊಡನೆ ಆಫೀಸಿಗೆ ಬಂದ. ಅವನ ಜೊತೆಗಿದ್ದ ಹೊಸಬರನ್ನು ನಾನು ಕುತೂಹಲದಿಂದ ನೋಡುತ್ತಿದ್ದೆ. ನನ್ನ ಸ್ನೇಹಿತ ಅವರು ದೆಹಲಿಯಿಂದ ಬಂದಿದ್ದಾರೆಂದು, ಬೆಂಗಳೂರಿನಲ್ಲಿ ಹೊಸ ವ್ಯಾಪಾರ ಶುರು ಮಾಡುವ ಯೋಜನೆ ಹೊಂದಿದ್ದಾರೆಂದೂ ಹೇಳಿದ. ನಾನು ಆತನ ಕೈಕುಲುಕಿದೆ. ಆತ ತನ್ನ ಪರಿಚಯ ಚೀಟಿಯನ್ನು(ವಿಸಿಟಿಂಗ್ ಕಾರ್ಡ್) ನನಗೆ ಕೊಟ್ಟ. ಅದರಿಂದ ಹೊರಡುತ್ತಿದ್ದ ಸುವಾಸನೆಯನ್ನು ಆಘ್ರಾಣಿಸಿ 'ಆಹ್, ಗಂಧ' ಎಂದು ಅದನ್ನು ಮೇಜಿನ ಮೇಲಿಟ್ಟೆ. ಆಗ ಅದೇಕೊ ಆತನ ಮುಖದಲ್ಲಿ ಮುಜುಗುರದ ಭಾವನೆ ಕಂಡು ನನಗೆ ಕಸಿವಿಸಿಯಾಯಿತು. ಇದನ್ನರಿತ ನನ್ನ ಸ್ನೇಹಿತ ನಕ್ಕು ಹೇಳಿದ: 'ಓಹ್, ಈಗ ಅರ್ಥವಾಯಿತು ಅವರ ಭಾಷೆಯಲ್ಲಿ ಗಂಧ ಎಂದರೆ ಕೊಳಕು, ಹೊಸಲು ಎಂದರ್ಥ. ನೀನು ಗಂಧ ಎಂದು ಹೇಳಿದ್ದಕ್ಕೆ ಆತ ಬೇಸರಿಸಿಕೊಂಡ.'



ಚಿತ್ರಗಳು: ಗಣೇಶ ಆಚಾರ್ಯ

**ಶ್ರೀನಾಥ್ ಕೊನೇಟಿ**